ಲೋಟ ಹಾಲು. ಇನ್ನು ಪ್ರತಿ ತಿಂಗಳೂ ಚಂಪಾ ಮೂರು ದಿನ ಹೊರಗೆ ಕೂರುವ ತಾಪತ್ರಯ ಇಲ್ಲ. ಅದಕ್ಕೆ ಕಾರಣವಾದ ಗರ್ಭಕೋಶ ತೆಗೆಸಿಕೊಂಡು ಬಂದಿದ್ದಾಳೆ ಚಂಪಾ. ತೌರುಮನೆಯವರು 'ಬೇಡ' ಅಂದಿರಲಿಲ್ಲ. ಯಾರದೋ ಮನೆಯಲ್ಲಿ ಬದುಕು ಕಟ್ಟಿಕೊಳ್ಳಬೇಕಾದರೆ ಹೆಣ್ತನದ ಅದೊಂದು ರಗಳೆ ಅಡ್ಡಿಯಾಗುವುದಾದಲ್ಲಿ ಅದು ಯಾಕೆ ಬೇಕು? ಚಂಪನ ಮಟ್ಟಿಗೆ ಅದು ಇದ್ದರೂ ಒಂದೇ, ಇಲ್ಲದಿದ್ದರೂ...

"ಸುಕಾಸುಮ್ನೆ ಹಿಂಗಿದ್ದೆಲ್ಲಾ ಮಾಡೋ ಡಾಕ್ಟ್ರು ಇದಾರನೇ?" ಕೇಳಿದ್ದರು ಸುಭದ್ರಮ್ಮ ಬೆರಗಿನಿಂದ, ವಿಷಾದದಿಂದ.

ಚಂಪಾ ಬಾಯ್ಬಿಟ್ಟು ಹೇಳದಿದ್ದರೂ ಅರ್ಥವಾಗಿತ್ತು ಸುಭದ್ರಮ್ಮನಿಗೆ. ದುಡ್ಡು. ಅದಕ್ಕೆಂದೇ ಪಾಪದ ಹುಡುಗಿ ಕೂಡಿಟ್ಟ ದುಡ್ಡನ್ನು ತೆಗೆದುಕೊಂಡು ಹೋಗಿದ್ದಾ? ರಾಮ ರಾಮಾ...

★★★

ಸುಭದ್ರಮ್ಮನ ಹರಕುಬಾಯಲ್ಲಿ ಗುಟ್ಟು ನಿಲ್ಲಲಿಲ್ಲ. ಗಂಡನ ಕಿವಿಯಲ್ಲಿ ಗುಸುಗುಟ್ಟಿದರು. ಮನೆಗೆ ಬಂದ ಮಗಳ ಕಿವಿಯಲ್ಲೂ ವರದಿದರು. 'ಪಾಪ...' ಅಂದಳು ಮಾಲಿನಿ ಹೃತ್ಪೂರ್ವಕವಾಗಿ. ಒಡಲೊಳಗೆ ಹೊರಳಾಡುವ ಕಂದನನ್ನು ಇಟ್ಟುಕೊಂಡು ಅದರ ಆಗಮನದ ನಿರೀಕ್ಷೆಯಲ್ಲಿದ್ದವಳಿಗೆ ಈ ಥರದ ನಡವಳಿಕೆ ಊಹೆಗೂ ಮೀರಿದ್ದು. ಕೇಳಿದಾಗಿನಿಂದ ತಲೆಯಲ್ಲಿ ಗಿರಗಿಟ್ಟಿ ಹೊಡೆಯುತ್ತಿದ್ದಿದ್ದು ರಾತ್ರಿ ಊಟದ ಹೊತ್ತಲ್ಲಿ ಮಾತಾಗಿ ಹೊರಬಿತ್ತು,

"ಎಂತೆಂತೋರು ಇರ್ತಾರೆ ನೋಡಿ..." ಬದಿ ಕೂತ ಗಂಡನಿಗೆ, ಒಡಹುಟ್ಟಿದವಳೊಡನೆ ಒಡನಾಡಲು ಧಾವಿಸಿ ಬಂದಿದ್ದ ಅಣ್ಣನಿಗೆ ಅವಳು ಸುದ್ದಿ ತಲುಪಿಸಲು ಹೊರಟಿದ್ದು ಸುಭದ್ರಮ್ಮನಿಗೆ ಇಷ್ಟವಾಗಲಿಲ್ಲ. "ಸಾಕು ಬಿಡೇ, ಊಟದ ಹೊತ್ತಿಗೆ ಮಾತಾಡೋ ವಿಷಯಾನಾ?" ಎನ್ನುತ್ತಾ ತಡೆಯಲು ನೋಡಿದ ಅವರ ಸೂಕ್ಷ್ಮ ಮಗಳಿಗೆ ಗೊತ್ತಾಗಲಿಲ್ಲ. ಬೇಲಿಯ ಬಂಧನವಿಲ್ಲ ಅನ್ನುವ ಸಂಗತಿ ಎಲ್ಲರೆದುರೂ ಜಾಹೀರುಗೊಳಿಸುವ ವಿಷಯವಲ್ಲ ಎಂದು ಅವರ ತಿಳಿವಳಿಕೆ. 'ತಾನು ಬಾಯಿಗೆ ಬೀಗ ಹಾಕಿಕೊಂಡಿರಬೇಕಿತ್ತು' ಎಂದು ವಾಚಾಳಿ ಸುಭದ್ರಮ್ಮನಿಗೆ ತೀವ್ರವಾಗಿ ಅನಿಸುತ್ತಿರುವ ಆ ಹೊತ್ತಿನಲ್ಲಿ ಊಟದ ಜೊತೆ ತಾನು ಉಪ್ಪಿನಕಾಯಿ ಆದ ಅರಿವಿಲ್ಲದ ಮುಗ್ಧೆ ಮೂಲೆಯ ಕೋಣೆಯಲ್ಲಿ ಮುದುಕಮ್ಮನಿಗೆ ಒಪ್ಪವಾಗಿ ಹೊದಿಕೆ ಹೊದೆಸುತ್ತಿದ್ದಳು.


## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರ ಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.